# ಪ್ರಹಸನ ಪ್ರಸಂಗ

**ವ್ಯಕ್ತಿ**ಯೊಬ್ಬನು ಸಪ್ಪೆ ಮುಖ ಮಾಡಿ ಕೊಂಡು ತನ್ನ ಸ್ನೇಹಿತನಿಗೆ ಹೇಳಿದನು :

'ಇಂದು ಬಸ್ಸಿನಲ್ಲಿ ನನಗೆ ನೂರು ರೂಪಾಯಿಯ ಎರಡು ನೋಟುಗಳು ಸಿಕ್ಕಿದವು.'

ಸ್ನೇಹಿತ : 'ನೀನು ಒಳ್ಳೆ ಅದೃಷ್ಟವಂತಕಣಯ್ಯ! ಆದರೂ ಸಪ್ಪೆ ಮುಖ ಏಕೆ?'

ವ್ಯಕ್ತಿ : 'ಇನ್ನೊಬ್ಬ ಪ್ರಯಾಣಿಕನೂ ಆ ನೋಟುಗಳನ್ನು ನೋಡಿದ.'

ಸ್ನೇಹಿತ : 'ಅವನಿಗೂ ನೂರು ರೂ. ಕೊಡಬೇಕಾಯಿತು ತಾನೆ! ನಿನಗೆ ೧೦೦ ರೂ. ಆದರೂ ಸಿಕ್ಕಿತಲ್ಲಯ್ಯ, ಮತ್ತ್ಯಾಕೆ ಯೋಚನೆ?'

ವ್ಯಕ್ತಿ : 'ಹಾಗಲ್ಲ, ಮನೆಗೆ ಹೋದಮೇಲೆ ಗೊತ್ತಾಯಿತು, ಆ ೨೦೦ ರೂ. ನನ್ನ ಜೇಬಿನಿಂದಲೇ ಬಿದ್ದದ್ದು ಎಂದು.'

ನಾವು ಬಾಹ್ಯ ವಿಷಯಾಸಕ್ತರಾಗಿ ನಮ್ಮ ಅರಿವಿಲ್ಲದೆಯೇ ನಮ್ಮ ಅಂತರಂಗದ ಶಾಂತಿಯನ್ನು ಕಳೆದುಕೊಳ್ಳುತ್ತೇವೆ. ಹೊರಗಡೆ ಎಷ್ಟೇ ಸುಖ ಶಾಂತಿ ಸಿಕ್ಕಿದರೂ, ಆ ಕಳೆದುಹೋದ ಶಾಂತಿಯನ್ನು ನೆನಸಿಕೊಂಡಾಗ, ಅದು ತೃಪ್ತಿಯನ್ನು ನೀಡುವುದಿಲ್ಲ. ☐

**ಒಂದು** ಗಣಿಯಲ್ಲಿ ಕೆಲಸ ಮಾಡುತ್ತಿದ್ದವನೊಬ್ಬನಿಗೆ ಹುಚ್ಚು ಹಿಡಿಯಿತು. ಅವನನ್ನು ಹುಚ್ಚಾಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆ ಹುಚ್ಚರದಾದರೂ ಸ್ವಚ್ಛವಾಗಿತ್ತು, ಎಲ್ಲ ಅತ್ಯಂತ ವ್ಯವಸ್ಥಿತವಾಗಿತ್ತು. ಭವ್ಯವಾದ ಕಟ್ಟಡ, ಸುಂದರವಾದ ತೋಟ, ಒಳ್ಳೆಯ ಊಟ-ಉಪಚಾರ—ಇವೆಲ್ಲ ಹುಚ್ಚರ ಸಲುವಾಗಿ.

ಕೆಲವು ತಿಂಗಳುಗಳಾದಮೇಲೆ ಆತನ ಸ್ನೇಹಿತನು ಅವನನ್ನು ನೋಡಲು ಬಂದನು. ಆತನಾಗ ಸಾಕಷ್ಟು ಸ್ವಾಭಾವಿಕ ಸ್ಥಿತಿಗೆ ಬಂದಿದ್ದನು. ಸ್ನೇಹಿತನು ಅವನನ್ನು ಕೇಳಿದ : 'ನೀನು ಯಾವಾಗ ಮರಳಿ ಗಣಿಯ ಕೆಲಸಕ್ಕೆ ಹಿಂದಿರುಗುತ್ತೀಯೆ?' ಹುಚ್ಚನು ಆಶ್ಚರ್ಯದಿಂದ ಹೇಳಿದ : 'ಏನು? ನನಗೇನು ಹುಚ್ಚುಹಿಡಿದಿದೆಯೆ, ಇಂತಹ ಒಳ್ಳೆಯ ಜಾಗವನ್ನು ಬಿಟ್ಟು ಅಲ್ಲಿಗೆ ಬರುವುದಕ್ಕೆ!'

ಹೀಗೆಯೇ ನಾವೂ ಕೂಡ ಈ ಜಗತ್ತೆಂಬ ಹುಚ್ಚಾಸ್ಪತ್ರೆಗೆ ಬಂದು, ಇದರ ಸುಖಭೋಗಗಳಲ್ಲೇ ಮತ್ತರಾಗಿ ಹಿಂತಿರುಗಿ ಭಗವಂತನೆಡೆಗೆ ಹೋಗಲು ಇಷ್ಟಪಡುವುದೇ ಇಲ್ಲ. ☐

ನಾವು ಹಿಂದಿನ ವೈಭವಕ್ಕೆ ಪ್ರಾಧಾನ್ಯತೆಯನ್ನು ನೀಡಿ, ಆ ಕನಸಿನ ಲೋಕದಲ್ಲೇ ವಾಸಿಸುತ್ತ ನಾವು ಇಂದು ಏನಾಗಿರುವೆವು ಎಂಬುದನ್ನೇ ಗಮನಿಸುವುದಿಲ್ಲ. ಹಿಂದೆ ಏನಾಗಿದ್ದೆವು ಮುಂದೆ ಏನಾಗುತ್ತೇವೆ ಎಂಬುದಕ್ಕಿಂತ ಇಂದು ಏನಾಗಿದ್ದೇವೆ ಎಂಬುದು ಮುಖ್ಯ.

ಜರ್ಮನರು ತಮ್ಮ ದೇಶದಲ್ಲಿ ೫೦ ಅಡಿ ಆಳ ಭೂಮಿಯನ್ನು ಅಗೆದರು. ಆಗ ತಾಮ್ರದ ಕೆಲವು ತುಂಡುಗಳು ಅವರಿಗೆ ಸಿಕ್ಕಿದವು. ಅವುಗಳ ಅಧ್ಯಯನ ಮಾಡಿ, ೨೫,೦೦೦ ವರ್ಷಗಳ ಹಿಂದೆ ಜರ್ಮನಿಯಲ್ಲಿ ದೇಶಾದ್ಯಂತ ದೂರವಾಣಿ ಸಂಪರ್ಕವಿತ್ತು ಎಂದು ತೀರ್ಮಾನಕ್ಕೆ ಬಂದರು.

ಬ್ರಿಟಿಷರಿಗೆ ಇದು ತಿಳಿದು ಅವರ ವಿಜ್ಞಾನಿಗಳೂ ನೆಲವನ್ನು ಅಗೆಯಲು ಪ್ರಾರಂಭಿಸಿದರು. ಅವರು ಇನ್ನೂ ಆಳ ಅಗೆದಾಗ ಚಿಕ್ಕ ಗಾಜಿನ ಚೂರುಗಳು ಸಿಕ್ಕಿದವು. ಸ್ವಲ್ಪ ಅಧ್ಯಯನವನ್ನು ನಡೆಸಿದಂತೆ ಮಾಡಿ, ೩೫,೦೦೦ ವರ್ಷಗಳ ಹಿಂದೆ ಬ್ರಿಟಿಷರು ದೇಶಾದ್ಯಂತ ಫೈಬರ್ ಆಪ್ಟಿಕ್ (Fibre optic) ಸಂಪರ್ಕ ವನ್ನು ಹೊಂದಿದ್ದರೆಂದು ಸಾರಿದರು.

ಈಗ ಫ್ರೆಂಚ್ ವಿಜ್ಞಾನಿಗಳು ಸುಮ್ಮನೆ ಕುಳಿತುಕೊಳ್ಳುತ್ತಾರೆಯೆ? ಅವರೂ ನೆಲ ಅಗೆದರು. ಎಷ್ಟೇ ಅಗೆದರೂ ಏನೂ ಸಿಗಲಿಲ್ಲ. ಕೊನೆಗೆ ಅವರು ಸಾರಿದರು : ೫೫,೦೦೦ ವರ್ಷಗಳ ಹಿಂದೆ ಪುರಾತನ ಫ್ರೆಂಚರು ಸೆಲ್ಯುಲರ್ ಫೋನುಗಳನ್ನು ಉಪಯೋಗಿಸುತ್ತಿದ್ದರು.

ಇದನ್ನು ತಿಳಿದ ಭಾರತೀಯ ಪಂಡಿತರು (ಅವರಿಗೆ ನೆಲ ಅಗೆಯುವುದಕ್ಕೂ ಸೋಮಾರಿತನ) ಹೇಳಿದರು: ಇದೆಲ್ಲವನ್ನೂ ಅವರು ಭಾರತೀಯರಿಂದಲೇ ಕಲಿತುಕೊಂಡು ಹೋದರು. ☐

### ಆಶ್ರಮದ ವಿಶೇಷ ಕಾರ್ಯಕ್ರಮಗಳು

### ನವೆಂಬರ್

| | | |
|---|---|---|
| 09 | ಗುರುವಾರ | ಸ್ವಾಮಿ ಅದ್ಭುತಾನಂದ ಜಯಂತಿ |
| 10 | ಶುಕ್ರವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |
| 12 | ಭಾನುವಾರ | ಆಧ್ಯಾತ್ಮಿಕ ಶಿಬಿರ ಸಂಜೆ 3.30ರಿಂದ 7.00 |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ